ಉಚ್ಚಂಗಿ ದುರ್ಗ ಗ್ರಾಮದಲ್ಲಿ ಪಶುವೈದ್ಯ ಶಾಲೆ ಸ್ಥಾಪನೆ

೭೬೮ ಶ್ರೀ ಬಿ. ಹೆಚ್. ಯಂಕಾನಾಯಕ್, (ಹರಪನ ಹಳ್ಳಿ).—ಮಾನ್ಯ ಪಶುಸಂಗೋಪನಾ.—ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನ ಹಳ್ಳಿ ತಾಲ್ಲೂಕಿನ ಉಚ್ಚಂಗಿ ದುರ್ಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪಶುವೈದ್ಯ ಶಾಲೆ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಉಚ್ಚಂಗಿ ದುರ್ಗ ಗ್ರಾಮಕ್ಕೆ ಪಶುವೈದ್ಯ ಶಾಲೆ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ; ಹಾಗೂ ಎಷ್ಟು ದಿನಗಳಲ್ಲಿ ಇದಕ್ಕೆ ಮಂಜೂರಾತಿ ನೀಡಲಾಗುವುದು ?

ಶ್ರೀ ಸಿದ್ದರಾಮಯ್ಯ, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು).—

ಅ) ಬಂದಿದೆ.

ಆ) ದಿನಾಂಕ ೧-೪-೮೭ ರಿಂದ ಹೊಸ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸುವ ಅಧಿಕಾರವು ಆಯಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಆದ ಪ್ರಯುಕ್ತ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಿಸಿದ ಜಿಲ್ಲಾ ಪರಿಷತ್ತಿಗೆ ತಿಳಿಸಲಾಗುವುದು.

ಕೈಮಗ್ಗ ನೇಕಾರರ ಪರಿಸ್ಥಿತಿ ತುಂಬಾ ಬಿಕ್ಕಟ್ಟಿಗೆ ಒಳಗಾಗಿರುವುದು

೬೯೭. ಶ್ರೀ ಶಿವಸಂಗಪ್ಪ ಶಿದ್ಧಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚರಕಾ, ರೇಷ್ಮೆ ಹಾಗೂ ಹತ್ತಿನೂಲಿನದರ ಅತೀ ಹೆಚ್ಚಾಗಿ ಕೈ ಮಗ್ಗದ ನೇಕಾರರ ಪರಿಸ್ಥಿತಿ ತುಂಬಾ ಬಿಕ್ಕಟ್ಟಿಗೆ ಒಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದಲ್ಲಿ ಅತೀ ಹೆಚ್ಚು ಕೈ ಮಗ್ಗಗಳು ಇರುವುದು ವಿಜಾಪುರ ಜಿಲ್ಲೆಯಲ್ಲಿ ಹಾಗೂ ದೇಶದಾದ್ಯಂತ ಕೈಮಗ್ಗ ಅವಲಂಭಿತರ ಸಂಖ್ಯೆ ಎರಡನೇಯ, ಸ್ಥಾನದಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಕೇಂದ್ರ ಸರ್ಕಾರದ ತಪ್ಪು ನೀತಿಯಿಂದಾಗಿ ಕೈಮಗ್ಗ ಅವಲಂಭಿಸಿದ ಬಡ ನೇಕಾರರು ಬೀದಿ ಪಾಲಾಗುವ ಪರಿಸ್ಥಿತಿಗೆ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ಬಡ ನೇಕಾರರ ತೊಂದರೆ ತಪ್ಪಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ವಿಜಾಪುರ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಕೈಮಗ್ಗಗಳು ಇರುವುದು ನಿಜ.

ಇ) ನೇಕಾರರ ಪರಿಸ್ಥಿತಿ ತುಂಬಾ ತೊಂದರೆಗೆ ಸಿಲುಕಿರುವುದು ರಾಜ್ಯ ಸರ್ಕಾರಕ್ಕೆ ತಿಳಿದಿದೆ

ಈ) ಆಗಿದ್ದಾಗ್ಯೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಸಹಕಾರಿ ನೂಲಿನ ಗಿರಣಿ, ಮತ್ತು ರಾಜ್ಯದಲ್ಲಿರುವ ಹಾಗು ಹೊರ ರಾಜ್ಯದಲ್ಲಿರುವ ಎನ್. ಟಿ. ಸಿ ಎಂಲ್‌ಗಳಿಂದ ನೂಲನ್ನು ಖರೀದಿಸಿ ನೇಕಾರರಿಗೆ ಸರಬರಾಜು ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ನೂಲಿನ ದರಗಳು ಹೆಚ್ಚಾಗಿ, ನೂಲಿನ ಅಭಾವವಿದ್ದುದರಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತಂದಾಗ ತಕ್ಷಣ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿ ನೂಲು ಸರಬರಾಜಿಗೆ ಅನುಕೂಲ ಮಾಡಿಕೊಟ್ಟಿರುತ್ತಾರೆ. ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮವು ದೇಶದ ಎಲ್ಲಾ ಭಾಗಗಳಿಂದ ಹತ್ತಿ ನೂಲನ್ನು ಸಂಗ್ರಹಿಸಿ ನಮ್ಮ ರಾಜ್ಯಕ್ಕೆ ಕಳುಹಿಸುತ್ತಿದ್ದು, ನಿಗಮವು. ರಾಜ್ಯದ ನೇಕಾರರಿಗೂ ಹಾಗೂ ಬಿಜಾಪುರ ಜಿಲ್ಲೆಯ ಎಲ್ಲಾ ಕೇಂದ್ರದ ನೇಕಾರರಿಗೂ ನೂಲನ್ನು ಸರಬರಾಜು ಮಾಡುತ್ತಿದೆ.